31-01-2016. Prajavani Page No. 3A

# ಕವಿಕಾ ಎಂ.ಡಿ ವಿರುದ್ಧ ಕ್ರಮಕ್ಕೆ ಆದೇಶ

ಬೆಂಗಳೂರು: 'ಕರ್ನಾಟಕ ವಿದ್ಯುತ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಡಬ್ಲ್ಯೂ.ಎಂ.ಶಿವಕುಮಾರ್ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿದ್ದು ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ಸಮಾಜ ಕಲ್ಯಾಣ ಇಲಾಖೆ ಮೇಲ್ಮನವಿ ಪ್ರಾಧಿಕಾರವು ಕೆಪಿಟಿಸಿಎಲ್‌ಗೆ ನಿರ್ದೇಶಿಸಿದೆ.

ಈ ಕುರಿತಂತೆ ಎನ್.ಲಕ್ಷ್ಮಣ್, ಶೀಲಾ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿಯನ್ನು ಇಲಾಖೆ ಆಯುಕ್ತ ವಿಕಾಸ್ ಕುಮಾರ್ ವಿಕಾಸ್ ಸೋಮವಾರ ವಿಲೇವಾರಿ ಮಾಡಿದರು.

'ಡಬ್ಲ್ಯೂ.ಎಂ. ಶಿವಕುಮಾರ್ ಹಿಂದೂ ಜಂಗಮ ಜಾತಿಗೆ ಸೇರಿದವರಾಗಿದ್ದು 2003ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು (ಯಲಹಂಕ) ತಹಶೀಲ್ದಾರ್ ಅವರಿಂದ ಬೇಡ ಜಂಗಮ ಎಂದು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಈ ಮೂಲಕ ತಾವು ಸೇವೆಗೆ ಸೇರಿದ 1980ರ ಅವಧಿಯಿಂದ ಪೂರ್ವಾನ್ವಯವಾಗುವಂತೆ ಎಲ್ಲ ಸೇವಾ ಹಿರಿತನ ಪಡೆದಿದ್ದಾರೆ. ಆದ್ದರಿಂದ ಅವರು ಪಡೆದಿರುವ ಸುಳ್ಳು ಜಾತಿ ಪ್ರಮಾಣ ಪತ್ರ ರದ್ದುಗೊಳಿಸಬೇಕು' ಎಂದು ಮೇಲ್ಮನವಿದಾರರು ಕೋರಿದ್ದರು.

ಪ್ರಜಾವಾಣಿ ಪುಟ-3B, 31/1/17

# ವನ್ಯಜೀವಿಗಳಿಗೆ ನೀರು ಪೂರೈಕೆ



ಬಂಡಿಪುರ, ನಾಗರಹೊಳೆ ಸೇರಿದಂತೆ ಎಲ್ಲೆಲ್ಲಿ ವನ್ಯ ಜೀವಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆಯೊ ಅಲ್ಲಿ ಬೋರ್‌ವೆಲ್ ಕೊರೆಸಿ ನೀರು ಒದಗಿಸುವ ಕಾರ್ಯವನ್ನು ಅರಣ್ಯ ಇಲಾಖೆ ಕೈಗೆತ್ತಿಕೊಂಡಿದೆ ಎಂದು ರೈ ತಿಳಿಸಿದರು. ಸೌರ ಶಕ್ತಿ ಚಾಲಿತ ಬೋರ್‌ವೆಲ್ ಗಳನ್ನು ಎಲ್ಲ ವನ್ಯ ಜೀವಿಧಾಮಗಳಲ್ಲಿ ಅಳವಡಿಸಲಾಗುತ್ತಿದೆ. ಸಾಕಷ್ಟು ಕಡೆಗಳಲ್ಲಿ ಕೆರೆಗಳು ಒಣಗಿ ಹೋಗಿವೆ. ಒಣಗಿರುವ ಕೆರೆಗಳ ಸಮೀಪದಲ್ಲಿ ಬೋರ್‌ವೆಲ್ ತೆಗೆಸಿ, ಮಣ್ಣಿನಿಂದ ಮಾಡಿದ ತೊಟ್ಟಿಗಳಿಗೆ ನೀರು ತುಂಬಿಸಲಾಗುವುದು ಎಂದು ಸಚಿವರು ತಿಳಿಸಿದರು.

ವಿಜಯವಾಣಿ, 31/01/17 Page No. 6

# ಜಲಾಶಯಗಳಲ್ಲಿ ನೀರಿನ ಮಟ್ಟ ಇಳಿಕೆ

**ಬೆಂಗಳೂರು:** ಲಿಂಗನಮಕ್ಕಿ ಸೇರಿದಂತೆ ಜಲವಿದ್ಯುತ್ ಉತ್ಪಾದನೆಯ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿದೆ. ವಿದ್ಯುತ್ ಬೇಡಿಕೆ ಹೆಚ್ಚಾಗಿದ್ದು, ಉತ್ಪಾದನೆ ಪ್ರಮಾಣವನ್ನು ಹೆಚ್ಚಳ ಮಾಡಿರುವುದು ನೀರಿನ ಸಂಗ್ರಹ ಕಡಿಮೆಯಾಗಲು ಕಾರಣವಾಗಿದೆ. ಈಗಿರುವ ನೀರಿನ ಸಂಗ್ರಹದಲ್ಲೇ ಇನ್ನೂ ಮೂರ್‍ನಾಲ್ಕು ತಿಂಗಳು ನಿಭಾಯಿಸಬೇಕಾಗಿದೆ. ಲಿಂಗನಮಕ್ಕಿಯಲ್ಲಿ ಶೇ.41, ಮಾಣಿಯಲ್ಲಿ ಶೇ.41 ಮತ್ತು ಸೂಪಾದಲ್ಲಿ ಶೇ.49 ಮಾತ್ರವೇ ನೀರಿನ ಸಂಗ್ರಹವಿದೆ. ಮೂರು ಜಲಾಶಯಗಳಲ್ಲಿ 3864 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ನೀರಿನ ಸಂಗ್ರಹವಿದೆ.

ವಿಜಯವಾಣಿ 31/01/17 Pg No. 6

# ಆರ್‌ಟಿಪಿಎಸ್‌ನ 5ನೇ ಘಟಕ ಸ್ಥಗಿತ

**ರಾಯಚೂರು:** ತಾಂತ್ರಿಕ ಸಮಸ್ಯೆಯಿಂದ ಆರ್‌ಟಿಪಿಎಸ್‌ನ 5ನೇ ಘಟಕ ಸೋಮವಾರ ಸಂಜೆ ಸ್ಥಗಿತಗೊಂಡಿದೆ. ಕಳೆದ ತಿಂಗಳಷ್ಟೇ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಘಟಕದ ದುರಸ್ತಿ ಮಾಡಲಾಗಿತ್ತು. 8 ಘಟಕಗಳ ಪೈಕಿ 2ನೇ ಘಟಕವನ್ನು ವಾರ್ಷಿಕ ದುರಸ್ತಿಗೆಂದು ಈಗಾಗಲೇ ನಿಲ್ಲಿಸಲಾಗಿದೆ. ಈಗ 6 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, 1199 ಮೆವಾ ವಿದ್ಯುತ್ ಉತ್ಪಾದಿಸಿ ರಾಜ್ಯ ಜಾಲಕ್ಕೆ ರವಾನಿಸಲಾಗುತ್ತಿದೆ.